Akashvani: Bangalore
National Bulletin In Kannada
13.08.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
13.08.2026: 13.10hrs
**********

**ಮುಖ್ಯಾಂಶಗಳು:**

1. ಸಂಸತ್ತಿನ ಉಭಯ ಸದನಗಳ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ
2. ೨೦೨೬ರ ಗಣಿ ಮತ್ತು ಖನಿಜಗಳ ಅಭಿವೃದ್ಧಿ ಹಾಗೂ ನಿಯಂತ್ರಣ ತಿದ್ದುಪಡಿ ಮಸೂದೆಗೆ ಸಂಸತ್ ಅಂಗೀಕಾರ
3. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ೧೧೫ ಕಲಾವಿದರಿಗೆ ೨೦೨೪-೨೫ನೇ ಸಂಗೀತ, ನಾಟಕ ಅಕಾಡೆಮಿ ಫೆಲೋಶಿಪ್ ಮತ್ತು ಪ್ರಶಸ್ತಿಗಳ ಪ್ರದಾನ
4. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರ ಪರಿಚಯಿಸಿದ್ದ ಒಬಿಸಿ ಪ್ರಮಾಣಪತ್ರಗಳನ್ನು ರದ್ದುಗೊಳಿಸಿದ ಕಲ್ಕತ್ತ ಹೈಕೋರ್ಟ್
5. ಇಂದು ಸಮಾಜ ಸುಧಾರಕಿ ಅಹಲ್ಯಾಬಾಯಿ ಹೋಲ್ಕರ್ ಅವರ ಪುಣ್ಯತಿಥಿ

**********

ಲೋಕಸಭೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ. ಕಳೆದ ತಿಂಗಳು ೨೦ ರಂದು ಪ್ರಾರಂಭವಾದ ಮಳೆಗಾಲದ ಅಧಿವೇಶನವು ೨೫ ದಿನಗಳಲ್ಲಿ ೧೯ ಕಲಾಪಗಳೊಂದಿಗೆ ಇಂದು ಮುಕ್ತಾಯಗೊಂಡಿತು. ವ್ಯಾಪಕ ಶ್ರೇಣಿಯ ಶಾಸಕಾಂಗ ಮತ್ತು ರಾಷ್ಟ್ರೀಯ ವಿಷಯಗಳ ಕುರಿತ ಚರ್ಚೆಗಳಿಗೆ ಸದನ ಸಾಕ್ಷಿಯಾಯಿತು. ಸಾರ್ವಜನಿಕ ಪರೀಕ್ಷೆಗಳು ಅನ್ಯಾಯದ ವಿಧಾನಗಳ ತಡೆಗಟ್ಟುವಿಕೆ ತಿದ್ದುಪಡಿ ಮಸೂದೆ ೨೦೨೬, ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ ತಿದ್ದುಪಡಿ ಮಸೂದೆ ೨೦೨೬, ನ್ಯಾಯಮಂಡಳಿ ಸುಧಾರಣಾ ಮಸೂದೆ ೨೦೨೬, ತೆರಿಗೆ ಮತ್ತು ಇತರ ಕಾನೂನುಗಳು ತಿದ್ದುಪಡಿ ಮಸೂದೆ ೨೦೨೬, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ತಿದ್ದುಪಡಿ ಮಸೂದೆ ೨೦೨೬ ಮತ್ತು ಕೇರಳ ಹೆಸರು ಬದಲಾವಣೆ ಮಸೂದೆ ೨೦೨೬ ಸೇರಿದಂತೆ ಹಲವಾರು ಪ್ರಮುಖ ಮಸೂದೆಗಳನ್ನು ಅಂಗೀಕರಿಸಲಾಯಿತು. ಇದೇ ಸಂದರ್ಭದಲ್ಲಿ ನೀಟ್ ಪತ್ರಿಕೆ

ಸೋರಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಪ್ರತಿಭಟನೆ, ಪ್ರತಿಭಟನಾ ನಿರತ ವಿದ್ಯಾರ್ಥಿಗಳ ವಿರುದ್ಧ ಪೊಲೀಸ್ ಕ್ರಮ ಮತ್ತು ಅಯೋಧ್ಯೆ ರಾಮ ಮಂದಿರ ಕಾಣಿಕೆಯಲ್ಲಿ ನಡೆದ ಅವ್ಯವಹಾರಗಳ ವಿಷಯದ ಕುರಿತ ಚರ್ಚೆಗಳು ಅಧಿವೇಶನವನ್ನು ಪದೇ ಪದೇ ಅಡ್ಡಿಪಡಿಸಿತು.

**********

ಸಂಸತ್ತು ೨೦೨೫ರ ಗಣಿ ಮತ್ತು ಖನಿಜ ಅಭಿವೃದ್ಧಿ ಹಾಗೂ ನಿಯಂತ್ರಣ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿದ್ದು, ಇಂದು ರಾಜ್ಯಸಭೆಯು ಅದನ್ನು ಅನುಮೋದಿಸಿದೆ.ಭಾರತದ ಗಣಿಗಾರಿಕೆ ವಲಯವನ್ನು ಹೆಚ್ಚು ಪರಿಣಾಮಕಾರಿ, ಹೂಡಿಕೆ ಸ್ನೇಹಿ ಮತ್ತು ದೇಶದ ಹೆಚ್ಚುತ್ತಿರುವ ನಿರ್ಣಾಯಕ ಖನಿಜಗಳ ಬೇಡಿಕೆಯನ್ನು ಪೂರೈಸಲು ಸುಸಜ್ಜಿತವಾಗಿಸುವ ಗುರಿಯನ್ನು ಈ ಮಸೂದೆ ಹೊಂದಿದೆ. ಬೆಳಿಗ್ಗೆ ೧೧ ಗಂಟೆಗೆ ಸದನವು ಸಭೆ ಸೇರಿದಾಗ, ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ ಕಿಶನ್ ರೆಡ್ಡಿ ಅವರು ೧೯೫೭ ರ ಗಣಿ ಮತ್ತು ಖನಿಜ ಅಭಿವೃದ್ಧಿ ಹಾಗೂ ನಿಯಂತ್ರಣ ಕಾಯ್ದೆಗೆ ಮತ್ತಷ್ಟು ತಿದ್ದುಪಡಿ ತರುವ ಮಸೂದೆಯನ್ನು ಮಂಡಿಸಿದರು. ಭಾರತದ ಗಣಿಗಾರಿಕೆ ವಲಯವನ್ನು ಹೆಚ್ಚು ಪರಿಣಾಮಕಾರಿ, ಹೂಡಿಕೆ ಸ್ನೇಹಿ ಮತ್ತು ದೇಶದ ಹೆಚ್ಚುತ್ತಿರುವ ನಿರ್ಣಾಯಕ ಖನಿಜಗಳ ಬೇಡಿಕೆಯನ್ನು ಪೂರೈಸಲು ಸುಸಜ್ಜಿತವಾಗಿಸುವ ಗುರಿಯನ್ನು ಈ ಮಸೂದೆ ಹೊಂದಿದೆ. ಗಣಿ ಮತ್ತು ಖನಿಜ ಅಭಿವೃದ್ಧಿ ಹಾಗೂ ನಿಯಂತ್ರಣ - ಎಂಎಂಡಿಆರ್ ಕಾಯ್ದೆಯಡಿಯಲ್ಲಿ ನಿಗದಿಪಡಿಸಲಾದ ನಿಯತಾಂಕಗಳಿಗೆ ಅನುಗುಣವಾಗಿ ಖನಿಜ ಅಂಶವನ್ನು ಹೊಂದಿರುವ ಭೂಮಿಯನ್ನು ನಿಯಂತ್ರಿಸುವುದನ್ನು ಮಸೂದೆಯ ಮೂಲಕ ಕೇಂದ್ರವು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಹಕಾರಿಯಾಗಲಿದೆ. ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸಿದ ಜಿ.ಕಿಶನ್ ರೆಡ್ಡಿ, ಸರ್ಕಾರ ಪಾರದರ್ಶಕತೆಯನ್ನು ಖಚಿತಪಡಿಸಿಕೊಂಡಿದ್ದು ಗಣಿಗಾರಿಕೆ ಸಂಪನ್ಮೂಲಗಳನ್ನು ಸರಿಯಾಗಿ ನಿರ್ವಹಿಸಲು ಹರಾಜುಗಳನ್ನು ನಡೆಸಿದೆ. ನರೇಂದ್ರ ಮೋದಿ ಸರ್ಕಾರಕ್ಕೆ ಮೊದಲು, ಭಾರತದ ಖನಿಜ ಸಂಪನ್ಮೂಲಗಳನ್ನು ಕಳಪೆಯಾಗಿ ನಿರ್ವಹಿಸಲಾಗುತ್ತಿತ್ತು. ಸ್ಥಾಪಿತ ಹಿತಾಸಕ್ತಿಗಳು ವಲಯದ ಮೇಲೆ ಪ್ರಭಾವ ಬೀರುತ್ತಿದ್ದವು. ಇದರಿಂದ ವ್ಯವಸ್ಥೆಯಲ್ಲಿ ಅಕ್ರಮಗಳು ಚಾಲ್ತಿಯಲ್ಲಿದ್ದವು ಎಂದು ಆರೋಪಿಸಿದರು. ಖನಿಜ ಸಂಪನ್ಮೂಲ ದೇಶದ ಅಭಿವೃದ್ಧಿಗೆ ಅಗತ್ಯವಾದ ರಾಷ್ಟ್ರೀಯ ಆಸ್ತಿ ಎಂದು ಸರ್ಕಾರ ನಂಬುತ್ತದೆ. ಈ ದಿಸೆಯಲ್ಲಿ ರಾಷ್ಟ್ರೀಯ ಹಿತಾಸಕ್ತಿಗಾಗಿ ಸಮರ್ಪಣಾಭಾವದಿಂದ ಕೆಲಸ ಮಾಡಿದೆ. ಕಳೆದ ೧೨ ವರ್ಷಗಳಲ್ಲಿ ಸರ್ಕಾರ ಕಲ್ಲಿದ್ದಲು

ಉತ್ಪಾದನೆಯನ್ನು ಗರಿಷ್ಠಗೊಳಿಸಿದೆ ಎಂದು ಸಚಿವರು ಹೇಳಿದರು. ದೇಶಾದ್ಯಂತ ಸರ್ಕಾರ ಹೆಚ್ಚುವರಿ ವಿದ್ಯುತ್ ಉತ್ಪಾದಿಸುತ್ತಿದೆ, ಅದರಲ್ಲಿ ಶೇಕಡಾ ೭೩ರಷ್ಟು ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳಿಂದ ಬರುತ್ತಿದೆ ಎಂದು ಅವರು ಹೇಳಿದರು. ೨೦೧೪-೧೫ರಲ್ಲಿ ರಾಜ್ಯ ಸರ್ಕಾರಗಳು ಖನಿಜ ಆದಾಯದ ಶೇ. ೬೫ ರಷ್ಟು ಪಡೆದಿದ್ದರೆ, ನರೇಂದ್ರ ಮೋದಿ ಸರ್ಕಾರದ ಅಡಿಯಲ್ಲಿ ಅವುಗಳ ಪಾಲು ಶೇ. ೮೫ ಕ್ಕೆ ಏರಿದೆ. ಈ ಹೆಚ್ಚಳವು ರಾಜ್ಯಗಳೊಂದಿಗೆ ಹೆಚ್ಚಿನ ಆದಾಯ ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವ ಮೋದಿ ಸರ್ಕಾರದ ವಿಧಾನವನ್ನು ಪ್ರತಿಬಿಂಬಿಸುತ್ತದೆ ಎಂದು ಸಚಿವರು ತಿಳಿಸಿದರು.

**********

ಪ್ರತಿಕೂಲ ಪರಿಸ್ಥಿತಿಗಳನ್ನು ಅನುಕೂಲಕರವಾಗಿ ಪರಿವರ್ತಿಸುವ ದೃಢಸಂಕಲ್ಪ, ಪರಿಶ್ರಮ ಮತ್ತು ಧೈರ್ಯವನ್ನು ಹೊಂದಿರುವ ವ್ಯಕ್ತಿಯು ಜೀವನದ ಸವಾಲುಗಳಿಂದ ಎಂದಿಗೂ ಸೋಲನುಭವಿಸುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಇಂದು ಹೇಳಿದ್ದಾರೆ. ನಿರಂತರ ಪ್ರಯತ್ನ ಮತ್ತು ಅಚಲ ಸಂಕಲ್ಪದ ಮೂಲಕ ವ್ಯಕ್ತಿಯು ಮುನ್ನಡೆದು ಅಂತಿಮವಾಗಿ ಯಶಸ್ಸನ್ನು ಸಾಧಿಸುತ್ತಾನೆ ಎಂದು ತಿಳಿಸಿರುವ ಪ್ರಧಾನಿ ಸಂಸ್ಕೃತ ಉಲ್ಲೇಖವನ್ನು ಹಂಚಿಕೊಂಡಿದ್ದಾರೆ.

**********

ನವದೆಹಲಿಯಲ್ಲಿ ನಡೆದ ವಿಶೇಷ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ೨೦೨೪ ಮತ್ತು ೨೦೨೫ರ ಸಂಗೀತ ನಾಟಕ ಅಕಾಡೆಮಿ ಫೆಲೋಶಿಪ್‌ಗಳು ಮತ್ತು ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ೧೧೫ ಕಲಾವಿದರಿಗೆ ಪ್ರದಾನ ಮಾಡಿದರು. ಸಂಗೀತ, ನೃತ್ಯ, ರಂಗಭೂಮಿ, ಜಾನಪದ ಮತ್ತು ಬುಡಕಟ್ಟು ಕಲೆಗಳು, ಬೊಂಬೆಯಾಟ, ಸಾಂಪ್ರದಾಯಿಕ ರಂಗಭೂಮಿ ಸೇರಿದಂತೆ ಇತರ ಸಂಬಂಧಿತ ಕ್ಷೇತ್ರಗಳಲ್ಲಿ ನೀಡಿರುವ ಕೊಡುಗೆಗಳನ್ನು ಗುರುತಿಸಿ ಈ ಪ್ರಶಸ್ತಿಗಳನ್ನು ನೀಡಲಾಗಿದೆ. ಫೆಲೋಶಿಪ್‌ಗೆ ಆಯ್ಕೆಯಾದವರು ಮತ್ತು ಪ್ರಶಸ್ತಿ ಪುರಸ್ಕೃತರು ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೇರಿದವರಾದರೂ ದೇಶವನ್ನು ಒಟ್ಟಾರೆಯಾಗಿ ಪ್ರತಿನಿಧಿಸುತ್ತಾರೆ. ಅಕಾಡೆಮಿ ಫೆಲೋ ಗೌರವವು ಮೂರು ಲಕ್ಷ ರೂಪಾಯಿಗಳ

ನಗದನ್ನು ಹೊಂದಿದ್ದರೆ, ಅಕಾಡೆಮಿ ಪ್ರಶಸ್ತಿಯು ತಾಮ್ರಪತ್ರ ಮತ್ತು ಅಂಗವಸ್ತ್ರದ ಜೊತೆಗೆ ಒಂದು ಲಕ್ಷ ರೂಪಾಯಿಗಳ ನಗದು ಬಹುಮಾನವನ್ನು ಒಳಗೊಂಡಿರುತ್ತದೆ.

**********

ಪಶ್ಚಿಮ ಬಂಗಾಳದಲ್ಲಿ ಹಿಂದಿನ ತೃಣಮೂಲ ಕಾಂಗ್ರೆಸ್ ಸರ್ಕಾರ ಪರಿಚಯಿಸಿದ ಪರಿಷ್ಕೃತ ನಿಯಮಗಳ ಅಡಿಯಲ್ಲಿ ನೀಡಲಾದ ಎಲ್ಲಾ ಇತರ ಹಿಂದುಳಿದ ವರ್ಗಗಳ ಪ್ರಮಾಣಪತ್ರಗಳನ್ನು ಕಲ್ಕತ್ತಾ ಹೈಕೋರ್ಟ್ ರದ್ದುಗೊಳಿಸಿದೆ. ಹಿಂದಿನ ವ್ಯವಸ್ಥೆಯಡಿಯಲ್ಲಿ ನೀಡಲಾದ ಪ್ರಮಾಣಪತ್ರಗಳು ತಮ್ಮ ಸಿಂಧುತ್ವವನ್ನು ಕಳೆದುಕೊಂಡಿವೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಒಬಿಸಿ ವಿವಾದವು ೨೦೧೦ರ ನಂತರದ ಅವಧಿಗೂ ಹಿಂದಿನದ್ದಾಗಿದ್ದು ಅಂದಿನ ತೃಣಮೂಲ ಕಾಂಗ್ರೆಸ್ ಸರ್ಕಾರವು ಒಬಿಸಿ ಸಮುದಾಯಗಳನ್ನು ಒಬಿಸಿ-ಎ ಮತ್ತು ಒಬಿಸಿ-ಬಿ ಎಂದು ಎರಡು ವರ್ಗಗಳಾಗಿ ವಿಂಗಡಿಸಿತ್ತು.  ಬಳಿಕ ಒಬಿಸಿ ಪ್ರಮಾಣಪತ್ರಗಳ ವಿತರಣೆಯಲ್ಲಿ ನಡೆದ ಅಕ್ರಮಗಳು ಮತ್ತು ಭ್ರಷ್ಟಾಚಾರದ ಆರೋಪಗಳು ಕಾನೂನು ಸವಾಲುಗಳಿಗೆ ಕಾರಣವಾಯಿತು.

**********

ಇಂದು ಸಮಾಜ ಸುಧಾರಕಿ ಅಹಲ್ಯಾಬಾಯಿ ಹೋಲ್ಕರ್ ಅವರ ಪುಣ್ಯತಿಥಿ. ಈ ಹಿನ್ನೆಲೆಯಲ್ಲಿ ಅಹಲ್ಯಾಬಾಯಿ ಹೋಲ್ಕರ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗೌರವ ಸಲ್ಲಿಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ದೇವಾಲಯಗಳ ನವೀಕರಣ ಮತ್ತು ಪುನರ್‌ನಿರ್ಮಾಣದಿಂದ ಹಿಡಿದು ಯಾತ್ರಾ ಸ್ಥಳಗಳ ಅಭಿವೃದ್ಧಿಯವರೆಗೆ ಪರಂಪರೆಯ ಸಂರಕ್ಷಣೆ ಮತ್ತು ಪುನಃಸ್ಥಾಪನೆಗೆ ಅಹಲ್ಯಾಬಾಯಿ ಹೋಲ್ಕರ್ ಅವರು ಅಪ್ರತಿಮ ಕೊಡುಗೆಗಳನ್ನು ನೀಡಿದ್ದಾರೆ ಎಂದು ಅವರು ಹೇಳಿದ್ದಾರೆ. ಮಹಿಳಾ ಶಿಕ್ಷಣ ಮತ್ತು ವಿಧವೆಯರ ಪುನರ್‌ವಿವಾಹವನ್ನು ಉತ್ತೇಜಿಸುವ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವ ಮೂಲಕ, ಅಹಲ್ಯಾಬಾಯಿ ಹೋಲ್ಕರ್  ಅವರು ಸಾರ್ವಜನಿಕ ಕಲ್ಯಾಣ, ನ್ಯಾಯ ಮತ್ತು ಉತ್ತಮ ಆಡಳಿತಕ್ಕೆ ಆದರ್ಶಪ್ರಾಯರಾಗಿದ್ದಾರೆ ಎಂದು ಗೃಹ ಸಚಿವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಅಹಲ್ಯಾಬಾಯಿ ಹೋಲ್ಕರ್ ಅವರು ಜನ-ಕೇಂದ್ರಿತ ಆಡಳಿತ, ಅದಮ್ಯ

ಧೈರ್ಯ ಮತ್ತು ಪ್ರವೀಣ ಆಡಳಿತದ ಅಸಾಧಾರಣ ಮಾದರಿಯನ್ನು ಪ್ರದರ್ಶಿಸಿದರು ಎಂದು ಹೇಳಿದ್ದಾರೆ. ಸಮಾಜದ ವಂಚಿತ ಮತ್ತು ಬುಡಕಟ್ಟು ಸಮುದಾಯಗಳ ಜೀವನೋಪಾಯ ಹಾಗೂ ಕಲ್ಯಾಣಕ್ಕಾಗಿ ಅವರು ಹಲವಾರು ಪ್ರಮುಖ ಕ್ರಮಗಳನ್ನು ತೆಗೆದುಕೊಂಡರು. ಅವರ ಜೀವನವು ನ್ಯಾಯ, ಉತ್ತಮ ಆಡಳಿತ, ಮಹಿಳಾ ಸಬಲೀಕರಣ, ಸಾರ್ವಜನಿಕ ಕಲ್ಯಾಣ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯ ಸ್ಫೂರ್ತಿದಾಯಕ ಕಥೆಯಾಗಿದೆ ಎಂದು ರಕ್ಷಣಾ ಸಚಿವರು ತಿಳಿಸಿದ್ದಾರೆ.

**********

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ-ಎನ್‌ಬಿಎ ಸಾಸಿವೆ ಜೆನೆಟಿಕ್ ರಿಸೋರ್ಸ್‌ನಿಂದ ಬರುವ ಹದಿನೈದು ಕೋಟಿ ರೂಪಾಯಿಗಳಿಗೂ ಅಧಿಕ ಪ್ರವೇಶ ಮತ್ತು ಲಾಭ ಹಂಚಿಕೆ ಎಬಿಎಸ್ ಆದಾಯವನ್ನು ಬಿಡುಗಡೆ ಮಾಡಿದೆ. ಈ ಮೊತ್ತವು ಇಪ್ಪತ್ತಾರು ರಾಜ್ಯ ಜೀವವೈವಿಧ್ಯ ಮಂಡಳಿಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶದ ಜೀವವೈವಿಧ್ಯ ಮಂಡಳಿಗಳಿಗೆ ಹರಿಯುತ್ತದೆ. ಪ್ರತಿ ರಾಜ್ಯದಲ್ಲಿ ಸಾಸಿವೆ ಬೆಳೆಯುವ ಪ್ರದೇಶದ ಆಧಾರದ ಮೇಲೆ ಎಬಿಎಸ್ ಪಾಲನ್ನು ಲೆಕ್ಕಹಾಕಲಾಗುತ್ತದೆ.

*****END*****